

II ಜೈ ಶ್ರೀ ಗುರುದೇವ್ II







II Jai Sri Gurudev II

**Sri Adichunchanagiri Shikshana Trust (R.)**

# BGS Boys / Girls Hostel

Agalagurki, Chickballapur - 562 101

Ph. No. 08156-293096, 263173, Mobile : 9972011537

# PROSPECTUS

ಮಾಹಿತಿ ಕೈಪಿಡಿ

## ಪೋಷಕರ ಗಮನಕ್ಕೆ

ನಮ್ಮ ವಿದ್ಯಾರ್ಥಿನಿಲಯಕ್ಕೆ ತಮ್ಮ ಮಕ್ಕಳನ್ನು ಸೇರಿಸಲು ಬಯಸುವ ಪೋಷಕರು ತಮ್ಮ ಅರ್ಜಿಯನ್ನು ಸಲ್ಲಿಸುವ ಮೊದಲೇ ಈ ಮಾಹಿತಿಪತ್ರಿಕೆಯಲ್ಲಿರುವ ಎಲ್ಲಾ ನಿಯಮಗಳನ್ನು ಸರಿಯಾಗಿ ಗಮನಿಸಿ, ಒಪ್ಪಿಗೆಯಿದ್ದಲ್ಲಿ ಮಾತ್ರ ಅರ್ಜಿಯನ್ನು ಸಲ್ಲಿಸಬೇಕಾಗಿ ವಿನಂತಿ.  ಮಕ್ಕಳನ್ನು ಸೇರಿಸಿದ ಮೇಲೆ ಅದರಲ್ಲಿರುವ ಎಲ್ಲಾ ನಿಯಮಗಳಿಗೆ ಪಾಲಕರೂ, ವಿದ್ಯಾರ್ಥಿ ಗಳು ಬದರಾಗುತ್ತಾರೆ ಎನ್ನುವುದು ತಮ್ಮ ಗಮನದಲ್ಲಿರಲಿ.

-ನಿಲಯ ಪಾಲಕರು

### ಪ್ರಸ್ತಾವನೆ

ಪರಮ ಪೂಜ್ಯ ಜಗದ್ಗುರು ಪದ್ಮಭೂಷಣ ಡಾ॥ ಶ್ರೀ ಶ್ರೀ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿಯವರು ಈಗಿನ ರಾಮನಗರ ಜಿಲ್ಲೆಯ ಬಿಡದಿ ಸಮೀಪ ಬಾನಂದೂರಿನಲ್ಲಿ ದಿನಾಂಕ 18-01-1945 ನೇ ಗುರುವಾರದಂದು ಜನ್ಮತಾಳಿ ಶ್ರೀ ಆದಿಚುಂಚನಗಿರಿ ಮಹಾ ಸಂಸ್ಥಾನ ಮಠದ 71 ನೇ ಪೀಠಾಧ್ಯಕ್ಷರಾದ್ದಂದಿನಿಂದ ಚುಂಚನಗಿರಿಯು ಮಹಿಮಾಗಿರಿಯಾಗಿ ಪ್ರಗತಿಯ ಶಕೆಯು  ಆರಂಭವಾಯಿತು. ''ಕರ್ಮ ತ್ಯಾಗವು ಸನ್ಯಾಸವಲ್ಲ ಕರ್ಮ ಫಲತ್ಯಾಗವೂ ಸನ್ಯಾಸ'' ಎಂಬುದನ್ನರಿತ ಶ್ರೀಗಳು ಶ್ರೀ ಕ್ಷೇತ್ರದ ಪ್ರಗತಿಗೆ ಯೋಜನೆಗಳನ್ನು ರೂಪಿಸಿ, ಶತಮಾನದಲ್ಲಿ ಸಾಧಿಸಲಾಗದ್ದನ್ನು  ಮೂರು ದಶಕಗಳಲ್ಲಿ ಪವಾಡ ಮೆರೆದು ಕರ್ಮಯೋಗಿ ಎನಿಸಿಕೊಂಡರು. ಶ್ರೀಮಠದ ಸರ್ವತೋಮುಖವಾದ ಪ್ರಗತಿಯನ್ನು ಶೈಕ್ಷಣಿಕ, ಧಾರ್ಮಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿ ಸಾಧಿಸುತ್ತಿದ್ದು ಅದರ ಯಶಸ್ಸಿಗಾಗಿ ಅವಿಶ್ರಾಂತವಾಗಿ ಶ್ರಮಿಸುತ್ತಿದ್ದಾರೆ.

ಪ್ರಥಮವಾಗಿ ಶ್ರೀ ಕ್ಷೇತ್ರದಲ್ಲಿ ಕಾಲಭೈರವೇಶ್ವರ ಸಂಸ್ಕೃತ ವೇದ ಆಗಮ ಮಹಾ ಪಾಠಶಾಲೆಯನ್ನು ತೆರೆದು ಜಾತಿ, ಮತ, ಭೇದವಿಲ್ಲದೇ ಅಲ್ಲಿ ಎಲ್ಲರೂ ಅಧ್ಯಯನ ಮಾಡುವಂತೆ ಅವಕಾಶ ಕಲ್ಪಿಸಿ ಧರ್ಮಮತ್ತು ಸಂಸ್ಕೃತಿಗಳ ವಿಚಾರಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ವರ್ಗವರ್ಣಗಳ ಭೇದ ಭಾವ ಈ ಮಹಾಸಂಸ್ಥಾನ ಮಠಕ್ಕಿಲ್ಲ. ಮಹಾಸ್ವಾಮೀಜಿಗಳವರ ಅಧ್ಯಕ್ಷತೆಯಲ್ಲಿ '' ಶ್ರೀ ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್‌ನ್ನು'' ಸ್ಥಾಪಿಸಿ ದೇಶದ ನಾನಾ ಭಾಗಗಳಲ್ಲಿ ಶಾಖಾಮಠಗಳನ್ನು ತೆರೆದು ಅವುಗಳ ಮುಖಾಂತರ ಸುಮಾರು 450 ಕ್ಕಿಂತಲೂ ಹೆಚ್ಚು ವಿದ್ಯಾ ಸಂಸ್ಥೆಗಳನ್ನು ಮತ್ತು ವಿದ್ಯಾರ್ಥಿನಿಲಯಗಳನ್ನು ತೆರೆಯುವುದರ ಮೂಲಕ 1 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಆಧುನಿಕ ಗುಣಾತ್ಮಕ  ಶಿಕ್ಷಣ ಪಡೆಯಲು ಅವಕಾಶ ಕಲ್ಪಿಸಿದ್ದಾರೆ. ಗ್ರಾಮಾಂತರ ಪ್ರದೇಶದ ಮಕ್ಕಳು ವಿದ್ಯಾವಂತರಾಗದೇ ಗ್ರಾಮೀಣರು ತಮ್ಮ ಜೀವನದಲ್ಲಿ ನೆಮ್ಮದಿ ಕಂಡುಕೊಳ್ಳರು ಎಂದರಿತ ಶ್ರೀಗಳು ಕೃಷಿ, ರೇಷ್ಮೆ, ತೋಟಗಾರಿಕೆ, ವೈದ್ಯಕೀಯ, ತಾಂತ್ರಿಕ ಶಿಕ್ಷಣ ಮುಂತಾದ ವೃತ್ತಿಪರ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ, ಅದರಲ್ಲಿ  ಚಿಕ್ಕಬಳ್ಳಾಪುರ ಶಾಖಾಮಠದ ಅಡಿಯಲ್ಲಿ ಬರುವ ಅಗಲಗುರ್ಕಿ ಬಿ. ಜಿ. ಎಸ್. ಗ್ರಾಮಾಂತರ ಪ್ರೌಢಶಾಲೆಯು ಸಹ ಒಂದಾಗಿದ್ದು ಪೂಜ್ಯ ನಿರ್ಮಲಾನಂದನಾಥ ಸ್ವಾಮೀಜಿಯವರ ಮಾರ್ಗದರ್ಶನದಲ್ಲಿ ಜಿಲ್ಲೆಯಲ್ಲಿಯೇ ಗುಣಾತ್ಮಕ ಶಿಕ್ಷಣಕ್ಕೆ ಹೆಸರುವಾಸಿಯಾಗಿದೆ. ಈ ಗ್ರಾಮಾಂತರ ಪ್ರೌಢಶಾಲೆಗೆ ಪ್ರತಿನಿತ್ಯ ಬಂದು ಹೋಗಲು ಅನಾನುಕೂಲಕಾರವಾದ ಗ್ರಾಮೀಣ ಪ್ರದೇಶದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಸತಿನಿಲಯವನ್ನು ಸ್ಥಾಪಿಸಿ ವಸತಿ ನಿಲಯದಲ್ಲಿ ದಾಖಲಾದ ಪ್ರತಿಯೊಬ್ಬ ವಿದ್ಯಾರ್ಥಿಯ ಶೈಕ್ಷಣಿಕ ಅಭ್ಯುದಯಕ್ಕೆ ಶ್ರಮಿಸಲಾಗುತ್ತಿದೆ.



## ಆಗಲಗುರ್ಕಿ ಬಿ. ಜಿ. ಎಸ್. ಶಿಕ್ಷಣ ಸಂಸ್ಥೆಯ ಅನನ್ಯತಾಂಶಗಳು

ಪೂಜ್ಯರ ದಿವ್ಯಾಶೀರ್ವಾದದಿಂದ ಆಗಲಗುರ್ಕಿ ಶಿಕ್ಷಣ ಸಂಸ್ಥೆಯು ಅತ್ಯುತ್ತಮವಾದ ಶಾಲಾ ಕಟ್ಟಡ, ವಿಶಾಲವಾದ ಆಟದ ಮೈದಾನ, ಆಧುನಿಕ ಕ್ರೀಡಾಪರಿಕರ ಉತ್ತಮವಾದ ಕಲಿಕಾ ಪರಿಸರ, ಮಕ್ಕಳ ಬೌದಿಕ ವಿಕಾಸಗೊಳಿಸುವ ಗ್ರಂಥಾಲಯ, ವೈಜ್ಞಾನಿಕ ಮನೋಭಾವನೆಗಳನ್ನು ಬೆಳೆಸುವ ಸುಸಜ್ಜಿತ ಕಂಪ್ಯೂಟರ್ ಪ್ರಯೋಗಾಲಯ,ಅನುಭವಿ ಬೋಧಕ ಸಿಬ್ಬಂದಿ, ವಿಜ್ಞಾನ ಪ್ರಯೋಗಾಲಯ ಮತ್ತು ಉತ್ತಮವಾದ ಆಡಳಿತ ವ್ಯವಸ್ಥೆ, ವ್ಯವಸ್ಥಿತವಾಗಿ ನಡೆಸಲಾಗುವ ಪರೀಕ್ಷೆಗಳು, ವಿದ್ಯಾರ್ಥಿಗಳಲ್ಲಿ ಅಡಗಿರುವ ಸುಪ್ತ ಪ್ರತಿಭೆಗಳನ್ನು ಹೊರತರುವ ಉದ್ದೇಶಹೊಂದಿರುವ ವಾರ್ಷಿಕಸಂಚಿಕೆ ಪ್ರಕಟಣೆ, ಚಿತ್ರಕಲೆ, ಕರ-ಕುಶಲ ನೃತ್ಯ ಶಿಕ್ಷಕರಿಂದ ವಿಶೇಷ ತರಗತಿಗಳು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳಲ್ಲಿ ಮಾನಸಿಕ ಬೌದಿಕ ವಿಕಾಸ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸುವ ನುರಿತ ಅನುಭವಿ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ಕಾರ್ಯಕ್ರಮ, ಭವಿಷ್ಯದಲ್ಲಿ ಮಕ್ಕಳಲ್ಲಿ ಪರಿಸರ ಪ್ರಜ್ಞೆ ಬೆಳೆಸುವ ವಿಭಿನ್ನ ರೀತಿಯ ಪಾಯೋಗಿಕ ತರಬೇತಿ, ಆಗಾಗ್ಗೆ ನಡೆಸಲಾಗುವ ಪುಸ್ತಕಗಳ ಮೇಳಗಳು.

## ಮೌಲ್ಯ ಶಿಕ್ಷಣ

**ಮೌಲ್ಯಗಳು :** ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ ನೈತಿಕ ಹಾಗೂ ಆಧ್ಯಾತ್ಮಿಕ ಚಿಂತನೆಯಿಂದ ಮೂಡಿ ಬಂದಂತಹ ನಂಬಿಕೆಗಳು ಹಾಗೂ ಜೀವನದ ಮಾರ್ಗಸೂಚಿಗಳು ನೈತಿಕನೆಲೆಯಿಂದ ಒಳ್ಳೆಯದು, ಬೆಲೆಯುಳ್ಳದ್ದು, ಯೋಗ್ಯವಾದದ್ದು ಮತ್ತು ಮಹತ್ವದ ಗುಣ ಹೊಂದಿರುವುದೇ ಮೌಲ್ಯ, ಗುಣಾತ್ಮಕವಾದ ಸಮಾಜಮಾನ್ಯವಾದ ನಿಯಮಗಳ ನಂಬಿಕೆಗಳು, ವರ್ತನೆಗಳು ಮೌಲ್ಯಗಳಾಗುತ್ತವೆ. ಮೌಲ್ಯಗಳು ಮನುಷ್ಯನ ಜೀವನ ಮತ್ತು ಶಿಕ್ಷಣ ಗುರಿಗಳೊಂದಿಗೆ ನಿಕಟ ಸಂಬಂಧ ಹೊಂದಿದ್ದು ಜೀವನ ಮತ್ತು ಶಿಕ್ಷಣಕ್ಕೆ ಮೌಲ್ಯಗಳ ಆಧಾರ ಅತ್ಯವಶ್ಯಕ ಎಂಬುದನ್ನರಿತ ಸಂಸ್ಥೆ ಪಠ್ಯವಿಷಯಗಳ ಜೊತೆಜೊತೆಗೆ ಮೌಲ್ಯ ಶಿಕ್ಷಣಕ್ಕೂ ಸಹ ಅಷ್ಟೇ ಒತ್ತನ್ನು ನೀಡಿ ವಿದ್ಯಾರ್ಥಿಗಳಲ್ಲಿ ಸರ್ವತೋಮುಖ ಅಭಿವೃದಿಗೆ ಕಂಕಣಬದವಾಗಿದ್ದು ವಾರದಲ್ಲಿ ಎರಡು ಗಂಟೆಗಳ ಕಾಲ ಮೌಲ್ಯ ಶಿಕ್ಷಣದ ಬೋಧನೆಯನ್ನು ನೀಡಲಾಗುತ್ತದೆ.

## ಮಾತೃ ಭೋಜನ

ಇದೊಂದು ಜಿಲ್ಲೆಯಲ್ಲಿಯೇ ವಿಭಿನ್ನವಾದ ತಾಯಿ ಮತ್ತು ಮಕ್ಕಳ ಸಂಬಂಧವನ್ನು ಗಟ್ಟಿಗೊಳಿಸುವ ವೈಶಿಷ್ಟಪೂರ್ಣ ಕಾರ್ಯಕ್ರಮವಾಗಿದೆ. ಪ್ರತಿ ವಿದ್ಯಾರ್ಥಿಯು ತಾಯಂದಿರು ತಾವು ತಯಾರಿಸಿ ತಂದ ವಿವಿಧ ಭಕ್ಷ ಭೋಜನಗಳನ್ನು ಹಸಿರಿನಿಂದ ಕಂಗೊಳಿಸುವ ಶಾಲೆಯ ಮೈದಾನದಲ್ಲಿ ಪೂಜ್ಯರ, ಶಿಕ್ಷಕರ, ಅತಿಥಿಗಳ, ಪೋಷಕರ ಸಮ್ಮುಖದಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ತಾಯಂದಿರು ಕೈ ತುತ್ತು ನೀಡುವ ಮೂಲಕ ಮಾತೃಪ್ರೇಮವನ್ನು ಮೆರೆಯುತ್ತಾರೆ, ಅಲ್ಲದೇ ಈ ವಿಶೇಷ ಸಂದರ್ಭದಲ್ಲಿ ಯಾವುದೇ ತಾರತಮ್ಯ ಭಾವವಿಲ್ಲದೇ ಎಲ್ಲರೂ ಸಮಾನರು ಎಂಬ ಭಾವನೆಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸುವ ಮೂಲಕ ಮಾತೆಯ ಮೌಲ್ಯವನ್ನು ತಿಳಿಸಿಕೊಡುವ ವಿಶಿಷ್ಟ ಪದತಿಯನ್ನು ಸಾಕಷ್ಟು ವರ್ಷಗಳಿಂದ ನಮ್ಮ ಶಾಲೆ ಆಯೋಜಿಸುತ್ತಾ ಬಂದಿದ್ದು ಈ ಪದತಿಯು ಇತರ ಶಾಲೆಗಳಿಗೆ ಆದರ್ಶಪ್ರಾಯವಾದ ಸಂಪ್ರದಾಯವಾಗಿದೆ. ಈ ಸಂಪ್ರದಾಯವನ್ನು ಆಚರಣೆಗೆ ತರಲು ಪರಮ ಪೂಜ್ಯರು ಮುಖ್ಯ ಪ್ರೇರಣೆಯಾಗಿದ್ದಾರೆ ಎಂಬುದು ಸರ್ವವಿಧಿತವಾದ ವಿಷಯವಾಗಿದೆ.

## ಪಠ್ಯೇತರ ಚಟುವಟಿಕೆಗಳು

**ಕ್ರೀಡೆ :** ಸದೃಢವಾದ ದೇಹದಲ್ಲಿ ಸದೃಢವಾದ ಮನಸ್ಸಿರುತ್ತದೆ'' ಎಂದರಿತ ಮಹಾಗುರುಗಳು ಶಿಕ್ಷಣದ ಜೊತೆಗೆ ಪಠ್ಯೇತರ ಚಟುವಟಿಕೆಗಳಿಗೂ ಅಷ್ಟೇ ಒತ್ತನ್ನು ನೀಡುತ್ತಾ ಬಂದಿದ್ದಾರೆ. '' ಆದಿಚುಂಚನಗಿರಿ ಶಿಕ್ಷಣ ಟ್ರಸ್ಟ್'' ವತಿಯಿಂದ ಕರ್ನಾಟಕ ದಾದ್ಯಂತವಿರುವ ತಮ್ಮ ಸಂಸ್ಥೆಯ ಎಲ್ಲಾ ಶಾಲಾ ಕಾಲೇಜುಗಳ ಕ್ರೀಡಾಕೂಟವನ್ನು ಪ್ರತಿವರ್ಷ ವಿಭಾಗ ಮಟ್ಟ ಹಾಗೂ ರಾಜ್ಯ ಮಟ್ಟದಲ್ಲಿ ಕ್ರೀಡಾಕೂಟವನ್ನು ಏರ್ಪಡಿಸಿ ಪ್ರತಿಭಾನ್ವಿತ ಕ್ರೀಡಾಪಟುಗಳನ್ನು ಗೌರವಿಸಿ ರಾಷ್ಟ್ರೀಯ ಅಂತರಾಷ್ಟ್ರೀಯ ಕ್ರೀಡಾಪಟುಗಳನ್ನು ನಿರ್ಮಾಣ ಮಾಡುವಲ್ಲಿ ಸಂಸ್ಥೆ ತನ್ನ ಸಾರ್ಥಕ್ಯವನ್ನು ಪಡೆದಿದೆ. ಅಲ್ಲದೇ ಸಾರ್ವಜನಿಕ ಶಿಕ್ಷಣ ಇಲಾಖೆ ಕರ್ನಾಟಕ ಸರ್ಕಾರದ ಅಧೀನದಲ್ಲಿ ನಡೆಸಲಾಗುವ ಕ್ರೀಡಾಕೂಟಗಳಿಗೂ ಉತ್ತಮವಾಗಿರುವ ತಂಡಗಳನ್ನು ಆಯ್ಕೆ ಮಾಡಿ ಕಳುಹಿಸುವ ಮೂಲಕ ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದು ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ ಶಾಲಾ-ಕಾಲೇಜಿನಲ್ಲಿ ವಿಶೇಷವಾದ ತರಬೇತಿಯನ್ನು ಪ್ರತ್ಯೇಕ ದೈಹಿಕ ಶಿಕ್ಷಕರಿಂದ ನೀಡಲಾಗುತ್ತಿದೆ.

**ಯೋಗ :** ವಸತಿ ನಿಲಯದಲ್ಲಿರುವ ವಿದ್ಯಾರ್ಥಿಗಳ ಮಾನಸಿಕ ಹಾಗೂ ದೈಹಿಕವಾಗಿ ಆರೋಗ್ಯ ಕಾಪಾಡಿಕೊಳ್ಳುವ ಸಲುವಾಗಿ ಪ್ರತಿ ಭಾನುವಾರಗಳಂದು ಯೋಗ ಶಿಕ್ಷಕರಿಂದ ಯೋಗ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಅಲ್ಲದೇ ಪ್ರತಿ ಭಾನುವಾರ ರಾತ್ರಿ 8-00 ಗಂಟೆಯನಂತರ ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತದೆ. (ಪರೀಕ್ಷೆಯ ಸಮಯ ಹೊರತುಪಡಿಸಿ)

**ಭಜನೆ :** ಬಾಲಕ/ಬಾಲಕಿಯರ ವಸತಿ ನಿಲಯದಲ್ಲಿ ಪ್ರತಿಸಂಜೆ 6 ರಿಂದ 6-30 ರ ವರೆಗೆ ಸಂಗೀತ ಶಿಕ್ಷಕರ ಮಾರ್ಗದರ್ಶನದಲ್ಲಿ ದೇವರ ಭಕ್ತಿಗೀತೆಗಳು, ಮತಕ್ಕೆ ಸಂಬಂಧಿಸಿದ ಭಕ್ತಿ ಗೀತೆಗಳ ಗಾಯನ ಕಾರ್ಯಕ್ರಮವನ್ನು ನಡೆಸಲಾಗುತ್ತದೆ.

## ವಿದ್ಯಾರ್ಥಿನಿಲಯದ ನಿಯಮಗಳು

ಆದಿಚುಂಚನಗಿರಿ ವಿದ್ಯಾರ್ಥಿ ವಸತಿ ನಿಲಯದಲ್ಲಿ ಶಿಸ್ತು ಪಾಲನೆಗೆ ಹೆಚ್ಚಿನ ಮಹತ್ವವಿದೆ. ಶಾಲೆ, ಕಾಲೇಜು ಮತ್ತು ವಸತಿ ನಿಲಯದಲ್ಲಿ ಶಿಸ್ತು-ನಿಯಮಗಳನ್ನು ವಿದ್ಯಾರ್ಥಿಗಳು ಕಡ್ಡಾಯವಾಗಿ ಪಾಲಿಸತಕ್ಕದ್ದು. ವಸತಿ ನಿಲಯಕ್ಕೆ ಸಂಬಂಧಿಸಿದ ವರ್ಗದವರ ಜೊತೆ ವಿನಯ, ವಿಧೇಯತೆಯಿಂದ ವರ್ತಿಸಬೇಕಾಗುತ್ತದೆ.

1. ನಿಲಯದಲ್ಲಿ ಉಳಿದುಕೊಳ್ಳುವ ವಿದ್ಯಾರ್ಥಿಗಳು ನಿತ್ಯ ಬೆಳಿಗ್ಗೆ 5-00 ಗಂಟೆಗೆ ಏಳಬೇಕು. ರಾತ್ರಿ 11-00ಕ್ಕೆ ದೀಪವನ್ನು ಆರಿಸಿ ಮಲಗಬೇಕು.
2. ವಿದ್ಯಾರ್ಥಿಗಳು ವಿದ್ಯಾರ್ಥಿನಿಲಯದ ಸಮವಸ್ತ್ರವನ್ನು (ಬುಧವಾರ ಮತ್ತು ಭಾನುವಾರಗಳಂದು) ಹೊರತುಪಡಿಸಿ ಇನ್ನುಳಿದ ದಿನಗಳಂದು ಕಡ್ಡಾಯವಾಗಿ ಧರಿಸಬೇಕು.
3. ನಿಲಯದ ತಮ್ಮ ವಾಸದಕೋಣೆ ಮತ್ತು ನಿಲಯದ ಪರಿಸರವನ್ನು ಶುಭ್ರವಾಗಿರಿಸಿಕೊಳ್ಳಬೇಕು.
4. ವಿದ್ಯಾರ್ಥಿಗಳು ನಿಲಯದಲ್ಲಿ ಜೋರಾಗಿ ಮಾತನಾಡುವುದು ಮತ್ತು ಅನಾವಶ್ಯಕವಾಗಿ ಹರಟೆ ಹೊಡೆಯುವುದನ್ನು ನಿಷೇದಿಸಿದೆ. ಭಜನೆ, ಅಭ್ಯಾಸ ತರಗತಿ, ಸಭೆ ಸಮಾರಂಭಗಳಲ್ಲಿ ಬೇರೆಯವರನ್ನು ಕರೆತರಕೂಡದು ಮತ್ತು ಆಹಾರವನ್ನು ಅನಾವಶ್ಯಕವಾಗಿ ಬಿಸಾಡಬಾರದು.
5. ಗಡ್ಡ ಮೀಸೆಗಳನ್ನು ಬೆಳೆಸುವುದು, ವಿಚಿತ್ರ ಬಣ್ಣದ ಬಟ್ಟೆಗಳನ್ನು ಲುಂಗಿಗಳನ್ನು ಧರಿಸುವುದು ಮತ್ತು ಕೈಕಡಗಳನ್ನು ಹಾಕಿಕೊಳ್ಳುವುದು ಮುಂತಾದವುಗಳಿಗೆ ಇಲ್ಲಿ ಅವಕಾಶ ವಿರುವುದಿಲ್ಲ.
6. ಅನುಚಿತ, ಆತಂಕಕಾರಿ ಮತ್ತು ಅನಗತ್ಯವೆಂದು ಪರಿಗಣಿಸುವ ಪುಸ್ತಕಗಳನ್ನಾಗಲೀ, ವರ್ತಮಾನ ಪತ್ರಿಕೆಗಳನ್ನಾಗಲೀ ವಿದ್ಯಾರ್ಥಿಗಳು ತರುವುದನ್ನು ನಿಷೇಧಿಸಲಾಗಿದೆ. ವೈಯುಕ್ತಿಕ ರೇಡಿಯೋ, ಟ್ರಾನ್ಸಿಸ್ಟರ್ ವಾಕ್‌ಮನ್, ಟೇಪ್‌ರೆಕಾರ್ಡರ್, ಮೊಬೈಲ್‌ಫೋನ್ ಇತ್ಯಾದಿಗಳನ್ನು ಬಳಸಲು ಅವಕಾಶವಿಲ್ಲ.
7. ವಿದ್ಯಾರ್ಥಿಗಳು ಕೋಣೆಯಲ್ಲಿ ತಮ್ಮ ಬಳಿ 50-00 ರೂ. ಗಿಂತಲೂ ಹೆಚ್ಚಿನ ನಗದನ್ನು ಇರಿಸಿಕೊಳ್ಳಬಾರದು. ಹೆಚ್ಚಿನ ಹಣವನ್ನು ವಸತಿ ನಿಲಯದ ನಿಗದಿತ ಅಧ್ಯಾಪಕರಿಗೆ ನೀಡತಕ್ಕದ್ದು.
8. ವಸತಿ ನಿಲಯದಲ್ಲಿ ವಿದ್ಯಾರ್ಥಿಗಳು ತಮ್ಮ -ತಮ್ಮೊಳಗೇ ಅಥವಾ ಇತರರೊಡನೆ ಯಾವುದೇ ಆರ್ಥಿಕ ವ್ಯವಹಾರ ಇನ್ನಿತರ ಚಟುವಟಿಕೆಗಳನ್ನು ಇರಿಸಿಕೊಳ್ಳಬಾರದು.
9. ನಿಲಯಕ್ಕೆ ಸಂಬಂಧಿಸಿದ ಯಾವುದೇ ಸ್ವತ್ತು ಸಲಕರಣೆಗಳನ್ನು ಹಾಳುಮಾಡಬಾರದು. ಹಾಗೇನಾದರೂ ಹಾಳುಗೆಡವಿದಲ್ಲಿ ಸಂಸ್ಥೆ ವಿಧಿಸುವ ದಂಡವನ್ನು ವಿದ್ಯಾರ್ಥಿಗಳೇ ಪಾವತಿ ಸತಕ್ಕದ್ದು.



10. ವಿದ್ಯಾರ್ಥಿಗಳು ತಮ್ಮ ವಾಸಕ್ಕೆ ಕೊಡಲ್ಪಟ್ಟ ಕೋಣೆಯ ಹೊರತು ಇತರರ ಕೋಣೆಗೆ ವಿದ್ಯಾರ್ಥಿಗಳು ಪ್ರವೇಶಿಸಬಾರದು.
11. ವಿದ್ಯಾರ್ಥಿ ಗಳ ಪತ್ರ ವ್ಯವಹಾರ ಸಂಶೋಧನೆಗೆ ಒಳಪಡುತ್ತದೆ.
12. ವಿದ್ಯಾರ್ಥಿಗಳು ಪೂರ್ವಾನುಮತಿಯಿಲ್ಲದೇ ನಿಲಯದಿಂದ ಹೊರಗೆ ಹೋಗಬಾರದು.
13. ನಿಯಮ ನಿಬಂಧನೆಗಳನ್ನು ಪಾಲಿಸದೆ ಶಿಸ್ತನ್ನು ಉಲ್ಲಂಘಿಸಿದರೆ ವಿದ್ಯಾರ್ಥಿನಿಲಯ ದಾಖಲಾತಿಯನ್ನು ರದ್ದುಪಡಿಸಲಾಗುವುದು.

## ನಿಯಮ ಉಲ್ಲಂಘನೆ

1. ಶಿಸ್ತಿನ ವಿಚಾರದಲ್ಲಿ ಯಾವುದೇ ಸಡಿಲತೆಯಿಲ್ಲ. ವಿದ್ಯಾರ್ಥಿ ನಿಲಯದ ನಿಯಮಗಳನ್ನು ಉಲ್ಲಂಘಿಸಿದವರನ್ನು ನಿಲಯದಿಂದ ಹೊರಹಾಕಲಾಗುವುದು.
2. **ನಿಲಯದಿಂದ ನಿಷೇಧಿಸಲ್ಪಟ್ಟಿರುವ ವಸ್ತುಗಳು ವಿದ್ಯಾರ್ಥಿಗಳ ಬಳಿ ಕಂಡುಬಂದಲ್ಲಿ ಅದನ್ನು ನಿಲಯಕ್ಕೆ ಸಂಬಂಧಿಸಿದ ಅಧಿಕಾರಿಗಳು ವಶಪಡಿಸಿಕೊಂಡರೆ ಅಂತಹ ವಸ್ತುಗಳನ್ನು ಹಿಂತಿರುಗಿಸಲಾಗುವುದಿಲ್ಲ.**
3. ಭಾನುವಾರದಂದು ಮಾತ್ರವೇ ಪೋಷಕರು ವಿದ್ಯಾರ್ಥಿಗಳನ್ನು ಭೇಟಿ ಮಾಡುವುದಕ್ಕೆ ಬರಬೇಕು. ಪೋಷಕರನ್ನು ಯಾವುದೇ ಕಾರಣಕ್ಕೂ ತಮ್ಮ ಕೊಠಡಿಗೆ ಕರೆದುಕೊಂಡು ಹೋಗಬಾರದು. ಹಾಗೇನಾದರೂ ಆದಲ್ಲಿ ದಂಡನೆಗೆ ಗುರಿಪಡಿಸಬೇಕಾಗುತ್ತದೆ.



4. ನಿಲಯದಲ್ಲಿ ಯಾವುದೇ ರೀತಿಯ ನಿಂದನಾತ್ಮಕ ಪದಗಳನ್ನು ಬಳಸುವಂತಿಲ್ಲ. ಹಾಗೇನಾದರೂ ಕಂಡುಬಂದಲ್ಲಿ ಅವರನ್ನು ಶಾಲೆ ಮತ್ತು ನಿಲಯದಿಂದ ಹೊರಹಾಕಲಾಗುವುದು.
5. **ನಿಲಯದಲ್ಲಿ ಸಂಸ್ಥೆಗೆ ಸಂಬಂಧಿಸಿದ ವಸ್ತುಗಳನ್ನು ಹಾಳುಗೆಡುವಿದಲ್ಲಿ ಹಾಳು ಮಾಡಿದ ವಿದ್ಯಾರ್ಥಿಗಳಿಂದಲೇ ಅದನ್ನು ಭರಿಸಲಾಗುವುದು.**
6. ವಿದ್ಯಾರ್ಥಿಗಳು ತಮ್ಮ ಜನ್ಮ ದಿನಾಚರಣೆಯನ್ನು ಅದ್ದೂರಿಯಾಗಿ ಆಚರಿಸಲು ಅನುಮತಿಯಿರುವುದಿಲ್ಲ. ಹಾಗೇನಾದರೂ ಆದಲ್ಲಿ ಆ ವಿದ್ಯಾರ್ಥಿಯ ನಿಲಯದ ದಾಖಲಾತಿಯನ್ನು ಅನೂರ್ಜಿತಗೊಳಿಸಲಾಗುವುದು.
7. ರಾತ್ರಿಯ ವೇಳೆ ಪೋಷಕರು ನಿಲಯದಲ್ಲಿ ಉಳಿದುಕೊಳ್ಳಲು ಅವಕಾಶವಿರುವುದಿಲ್ಲ. ಪೋಷಕರು ವಿದ್ಯಾರ್ಥಿಯೊಂದಿಗೆ ದೂರವಾಣಿಯಲ್ಲಿ ಭಾನುವಾರಗಳಂದು ಮಾತ್ರ ಮಾತನಾಡಬಹುದು.
8. **ವಿದ್ಯಾರ್ಥಿಯು ಶಾಲಾ-ಕಾಲೇಜಿನಲ್ಲಿ ಅನುತ್ತೀರ್ಣರಾದರೆ ವಿದ್ಯಾರ್ಥಿನಿಲಯಕ್ಕೆ ಪ್ರವೇಶ ನೀಡಲಾಗುವುದಿಲ್ಲ.**

## ಪೋಷಕರ ಗಮನಕ್ಕೆ

1. **ವಿದ್ಯಾರ್ಥಿಗಳ ಗುಣ-ನಡತೆಗಳ ಆಧಾರದಲ್ಲಿ ಪ್ರತಿ ವರ್ಷ ದಾಖಲಾತಿಯನ್ನು ನವೀಕರಿಸಲಾಗುವುದು.**
2. ವಿದ್ಯಾರ್ಥಿಯು ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ನಿಲಯಕ್ಕೆ ದಾಖಲಾಗಲು ಅರ್ಹನಾದಲ್ಲಿ ಅಂತಹ ವಿದ್ಯಾರ್ಥಿಯು 2 ಕಂತಿನಲ್ಲಿ ಹಣವನ್ನು ಪಾವತಿಸಲು ಅವಕಾಶ ವಿರುತ್ತದೆ.
3. **ವಿದ್ಯಾರ್ಥಿಗಳು ನಿಲಯದಿಂದ ಅನುಮತಿ ಪಡೆಯದೇ ಹೊರಟು ಹೋದಲ್ಲಿ ಸಂಸ್ಥೆಯು ಜವಾಬ್ದಾರಿಯಲ್ಲ. ಅಂತಹ ವಿದ್ಯಾರ್ಥಿಗಳನ್ನು ನಿಲಯಕ್ಕೆ ಮತ್ತೆ ಸೇರಿಸಿಕೊಳ್ಳಲಾಗುವುದಿಲ್ಲ.**
4. **ವಿದ್ಯಾರ್ಥಿಗಳು ನಿಲಯವನ್ನು ಅರ್ಧದಲ್ಲೇ ಬಿಟ್ಟರೇ ತಾವು ಪಾವತಿಸಿದ ಹಣವನ್ನು ಮರುಪಾವತಿಸಲಾಗುವುದಿಲ್ಲ.**
5. ವಿದ್ಯಾರ್ಥಿನಿಲಯದಲ್ಲಿ ಧೂಮಪಾನ , ಮದ್ಯಪಾನ, ಮಾಂಸಾಹಾರಗಳನ್ನು ನಿಷೇಧಿಸಲಾಗಿದೆ. ಅವುಗಳನ್ನು ನಿಲಯದ ಒಳಗಡೆ ತರುವುದು ಕೂಡ ಅಪರಾಧ.
6. ಮೂರ್ಛೆರೋಗ, ಉಬ್ಬಸ, ಬೆಡ್-ವೆಟ್ಟಿಂಗ್ ಇತ್ಯಾದಿ ಧೀರ್ಘಕಾಲದ ಕಾಯಿಲೆಯಿರುವ ವಿದ್ಯಾರ್ಥಿಗಳು ದಾಖಲಾತಿಗೆ ಅರ್ಹರಲ್ಲ. ದಾಖಲಾತಿಯ ನಂತರ ಇಂತಹ ಸಮಸ್ಯೆ ಕಂಡುಬಂದಲ್ಲಿ ಅವರ ದಾಖಲಾತಿಯನ್ನು ರದ್ದುಪಡಿಸಲಾಗುವುದು.

1. ಪೌಷ್ಟಿಕವಾದ ಸಸ್ಯಾಹಾರದ ಜೊತೆಗೆ ವಾರದಲ್ಲಿ ಒಂದುದಿನ ಮೊಟ್ಟೆಯನ್ನು ನೀಡಲಾಗುವುದು. ಬೆಳಗಿನ ಉಪಾಹಾರ ಪ್ರತಿದಿನ ಉಪಹಾರದ ಪಟ್ಟಿಯಂತೆ ನೀಡಲಾಗುವುದು. ಮಧ್ಯಾಹ್ನ ರಾಗಿ ಮುದ್ದೆ ಊಟವಿದ್ದು ಪ್ರತಿದಿನ ರಾತ್ರಿವೇಳೆ ಚಪಾತಿಯ ವ್ಯವಸ್ಥೆಯಿರುತ್ತದೆ.
2. ವಸತಿ ನಿಲಯದಲ್ಲಿ (ಪ್ರತಿನಿತ್ಯವೂ) ಒಂದು ಗಂಟೆಯನ್ನು ಆಟಕ್ಕೆ ಮೀಸಲಿರಿಸಿದೆ.
3. ವಸತಿ ನಿಲಯದ ವಿದ್ಯಾರ್ಥಿಗಳಿಗೆ ಬೇಕಾಗುವ ಸ್ಟೇಷನರಿ, ಕಾಯಿನ್‌ಬೂತ್, ಸೆಲೂನ್ ಹಾಗೂ ಕ್ಯಾಂಟೀನ್ ಮುಂತಾದ ವ್ಯವಸ್ಥೆಗಳಿರುತ್ತದೆ.
4. ವಿದ್ಯಾರ್ಥಿನಿಲಯದಲ್ಲಿ ಆರೋಗ್ಯ ಕೇಂದ್ರವಿದ್ದು ಅದರ ನಿರ್ವಹಣೆಗಾಗಿ ವೈದ್ಯರನ್ನು ನೇಮಿಸಲಾಗಿದೆ, ಅಲ್ಲದೇ ನಿಲಯವು ತುರ್ತು ಚಿಕಿತ್ಸಾ ವಾಹನದ ಸೌಲಭ್ಯವನ್ನು ಹೊಂದಿರುತ್ತದೆ.
5. ಮಕ್ಕಳ ಉಪಯೋಗಕ್ಕಾಗಿ ದೂರದರ್ಶನದ ವ್ಯವಸ್ಥೆಯಿದ್ದು ಭಾನುವಾರಗಳಂದು ಮಾತ್ರ ವಿದ್ಯಾರ್ಥಿಗಳು ವೀಕ್ಷಿಸಲು ಅವಕಾಶಮಾಡಿಕೊಡಲಾಗುತ್ತದೆ.
6. ಅಭ್ಯಾಸದ ವೇಳೆಯಲ್ಲಿ ವಿದ್ಯಾರ್ಥಿಗಳ ಮೇಲ್ವಿಚಾರಣೆ ಮಾಡಲು ವಿಷಯವಾರು ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿರುತ್ತದೆ.
7. ವಿದ್ಯುಚ್ಛಕ್ತಿಯಲ್ಲಿ ವ್ಯತ್ಯಯವಾದಾಗ ವಿದ್ಯುಜ್ಜನಕದ ವ್ಯವಸ್ಥೆಯಿದೆ.
8. ವಿದ್ಯಾರ್ಥಿನಿಲಯಕ್ಕೆ ದೈಹಿಕ ಶಿಕ್ಷಕರನ್ನು ನೇಮಿಸಿಕೊಳ್ಳಲಾಗಿರುತ್ತದೆ.
9. ಇಂಗ್ಲೀಷ್ ಹಾಗೂ ಕನ್ನಡ ದಿನಪತ್ರಿಕೆಯ ಸೌಲಭ್ಯವಿರುತ್ತದೆ.
10. ಪ್ರತಿದಿನ ಬೆಳಿಗ್ಗೆ 6-00 ರಿಂದ 8-00 ಗಂಟೆಯವರೆಗೆ ಟ್ಯೂಷನ್ ತರಗತಿಗಳನ್ನು ನಡೆಸಲಾಗುತ್ತದೆ.
11. ವಿದ್ಯಾರ್ಥಿಗಳು ಪುಸ್ತಕಗಳನ್ನು ಇಡಲು ಕಪಾಟಿನ ವ್ಯವಸ್ಥೆ ಇರುತ್ತದೆ.ಮಲಗಲು ಮಂಚವನ್ನು ನೀಡಲಾಗುತ್ತದೆ.
12. ಪ್ರತಿಯೊಬ್ಬ ವಿದ್ಯಾರ್ಥಿಗೂ ಸಮವಸ್ತ್ರದ ವ್ಯವಸ್ಥೆಯಿರುತ್ತದೆ.
13. ಸ್ನಾನಕ್ಕೆ ಪ್ರತಿನಿತ್ಯ ಬಿಸಿನೀರಿನ ವ್ಯವಸ್ಥೆಯಿದೆ.
14. ಪ್ರತಿ ಕೊಠಡಿಗೆ ಒಬ್ಬೊಬ್ಬ ಶಿಕ್ಷಕರನ್ನು ಮೇಲ್ವಿಚಾರಕರನ್ನಾಗಿ ನೇಮಿಸಲಾಗಿರುತ್ತದೆ.

## ದಾಖಲಾತಿಯ ವಿವರಗಳು

ನಮ್ಮ ವಿದ್ಯಾರ್ಥಿ ನಿಲಯಕ್ಕೆ 6ನೇ ತರಗತಿಯಿಂದ ಪಿ.ಯು.ಸಿ.ಯವರೆಗೆ ದಾಖಲಾತಿಯನ್ನು ಮಾಡಿಕೊಳ್ಳಲಾಗುವುದು. ವಿದ್ಯಾರ್ಥಿಗಳಿಗೆ ವಸತಿ ನಿಲಯಕ್ಕೆ ಹಾಗೂ ಶಾಲಾ - ಕಾಲೇಜಿಗೆ ಪ್ರತ್ಯೇಕವಾದ ಶುಲ್ಕವನ್ನು ನಿಗದಿಪಡಿಸಲಾಗಿರುತ್ತದೆ. 6 ರಿಂದ 10ನೇ ತರಗತಿ ರಾಜ್ಯ ಪಠ್ಯ ಕ್ರಮದ ಇಂಗ್ಲೀಷ್ ಮಾಧ್ಯಮದ ವಿದ್ಯಾರ್ಥಿಗಳು ಮಾತ್ರ ದಾಖಲಾತಿಗೆ ಅರ್ಹರಾಗಿರುತ್ತಾರೆ. ಪಿ.ಯು.ಸಿ.ಯಲ್ಲಿ ವಿಜ್ಞಾನ, ವಾಣಿಜ್ಯ ಎಂಬ ಎರಡು ವಿಭಾಗಗಳಿರುತ್ತವೆ.

ವಿಜ್ಞಾನ ವಿಭಾಗದಲ್ಲಿ ಎರಡು ಸಂಯೋಜನೆಗಳಿರುತ್ತವೆ.

ಅ) ಪಿ.ಸಿ.ಎಂ.ಬಿ. ಆ) ಪಿ.ಸಿ.ಎಂ.ಸಿಎಸ್.

ವಾಣಿಜ್ಯ ವಿಭಾಗದಲ್ಲಿ ಅ) ಇ.ಬಿ.ಎ.ಸಿಎಸ್. (Computer Science)

ವಿದ್ಯಾರ್ಥಿಗಳು ವಸತಿನಿಲಯಕ್ಕೆ ದಾಖಲಾತಿಯನ್ನು ಬಯಸುವುದಾದರೆ ಪ್ರವೇಶ ಪರೀಕ್ಷೆಯಲ್ಲಿ ಆಯ್ಕೆಯಾಗಿದ್ದು ಶಾಲಾ-ಕಾಲೇಜಿಗೆ ದಾಖಲಾದ ನಂತರ ವಿದ್ಯಾರ್ಥಿ ನಿಲಯದಿಂದ ನೀಡಲಾಗುವ ಪ್ರತ್ಯೇಕ ಅರ್ಜಿಯನ್ನು ಪಡೆದು ಭರ್ತಿ ಮಾಡಿದ ಅರ್ಜಿಯನ್ನು ಸಲ್ಲಿಸಬೇಕು.
ಸಂದರ್ಶನದ ಮೂಲಕ ವಿದ್ಯಾರ್ಥಿಗಳನ್ನು ವಸತಿ ನಿಲಯಕ್ಕೆ ದಾಖಲು ಮಾಡಿಕೊಳ್ಳಲಾಗುವುದು. ಪಿ.ಯು.ಸಿ. ವಿದ್ಯಾರ್ಥಿಗಳನ್ನು ಎಸ್.ಎಸ್.ಎಲ್,ಸಿ. ಫಲಿತಾಂಶ ಬಂದ ನಂತರ ಅರ್ಹತೆ ಮೇಲೆ ಕಾಲೇಜಿನಲ್ಲಿ ದಾಖಲಾದ ನಂತರ ವಸತಿ ನಿಲಯಕ್ಕೆ ದಾಖಲು ಮಾಡಿಕೊಳ್ಳಲಾಗುವುದು. ಇವರಿಗೆ ಯಾವುದೇ ರೀತಿಯ ಪ್ರವೇಶ ಪರೀಕ್ಷೆ ಇರುವುದಿಲ್ಲ.

ವಿಶೇಷ ಸೂಚನೆ :- ಭರ್ತಿ ಮಾಡಿದ ಅರ್ಜಿಯನ್ನು ಖುದ್ದಾಗಿ ಪೋಷಕರೇ ಕಛೇರಿಗೆ ತಂದು ಸಲ್ಲಿಸಬೇಕು.

## ಪ್ರವೇಶ ಪರೀಕ್ಷೆಗೆ ನೀಡಲಾಗುವ ವಿಷಯಗಳು

ವಿದ್ಯಾರ್ಥಿಯು ಪ್ರವೇಶ ಪರೀಕ್ಷೆಯನ್ನು ಬರೆಯಲು ವಿದ್ಯಾರ್ಥಿಯು ಪ್ರಸ್ತುತ ಸೇರಬಯಸುವ ತರಗತಿಯ ಹಿಂದಿನ ವರ್ಷದ ಪಠ್ಯವಿಷಯಗಳನ್ನು ಚೆನ್ನಾಗಿ ಅಧ್ಯಯನ ಮಾಡಿರಬೇಕು.

ಅ) ಕನ್ನಡ, ಇಂಗ್ಲೀಷ್, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ ಆ) ಕನ್ನಡ ಭಾಷೆಯು ಮೌಲಿಕ ವಿಷಯವಾಗಿರುತ್ತದೆ

6-9ನೇ ತರಗತಿಯವರೆಗೆ

## ವಿದ್ಯಾರ್ಥಿ ನಿಲಯಕ್ಕೆ ತರಬೇಕಾದ ಅಗತ್ಯವಾದ ವಸ್ತುಗಳು

1. ಶ್ರೀ ಮಠದ ಆದೇಶದಂತೆ ಸಮವಸ್ತ್ರ ಧರಿಸಬೇಕು.
2. ಎರಡು ಸ್ಪೋರ್ಟ್ಸ್ ಬನಿಯನ್‌ಗಳು, ಎರಡು ಟವಲ್‌ಗಳು, ನಿಕ್ಕರ್‌ಗಳು ಒಂದು ಬಿಳಿಯ ಪಂಚೆ, ಎರಡು ಬಿಳಿ ಬನಿಯನ್‌ಗಳು.
3. ಒಂದು ಟ್ರಂಕ್, ಒಂದು ಜೊತೆ ಕಪ್ಪು ಬಣ್ಣದ ಬೂಟ್ಸ್‌ಗಳು, ಕಪ್ಪು ಕಾಲುಚೀಲಗಳು, ಒಂದು ಜೊತೆ ಬಿಳಿ ಬಣ್ಣದ ಕ್ಯಾನ್‌ವಾಸ್ ಶ್ಯೂ ಬಿಳಿ ಕಾಲುಚೀಲ.
4. ಒಂದು ಹಾಸಿಗೆ, ದಿಂಬು, ಎರಡು ಬೆಡ್ ಷೀಟ್‌ಗಳು.
5. ಒಂದು ಬಕೆಟ್, ಚೆಂಬು, ಕನ್ನಡಿ, ಬಾಚಣಿಗೆ, ಊಟದ ತಟ್ಟೆ, ಲೋಟ
6. ವಿದ್ಯಾರ್ಥಿಗಳಿಗೆ ತಗಲುವ ಅಂದಾಜು (ವೆಚ್ಚಗಳನ್ನು ತಾವೇ) ಬರಿಸಬೇಕು.

ಶಾಲೆ ಮತ್ತು ವಿದ್ಯಾರ್ಥಿ ನಿಲಯದ ಯಾವುದೇ ವಸ್ತುವನ್ನು ಹಾಳು ಮಾಡಿದರೆ ಅದಕ್ಕೆ ತಗಲುವ ಹಣವನ್ನು ವಿದ್ಯಾರ್ಥಿಯಿಂದಲೇ ಮುರಿದು ಕೊಳ್ಳಲಾಗುವುದು. ಇದರ ಜೊತೆಗೆ ನಿರ್ವಹಣಾ ಖರ್ಚನ್ನು ಸೇರಿಸಲಾಗುವುದು. ವಿದ್ಯಾರ್ಥಿಗಳಿಗೆ ಅಗತ್ಯವಾದ ಪುಸ್ತಕಗಳು ಪೆನ್ನು, ಪೆನ್ಸಿಲ್, ಶಾಯಿ, ಕಾಗದ, ಸೋಪು, ಮತ್ತಿತರ ಅಗತ್ಯ ವಸ್ತುಗಳನ್ನು ವಿದ್ಯಾರ್ಥಿಗಳು ತಮ್ಮ ಮನೆಯಿಂದಲೇ ತರುವುದು. ಕರ್ನಾಟಕ ಸರ್ಕಾರದ ವಿದ್ಯಾ ಇಲಾಖೆಯಿಂದ ನಿಗದಿಪಡಿಸುವ ಎಲ್ಲಾ ಶುಲ್ಕಗಳನ್ನು ಶಾಲೆಗೆ ಸೇರಿಸುವಾಗ ಪಾವತಿ ಮಾಡಬೇಕು.



## HOSTEL TIME TABLE

| | | |
|---|---|---|
| 5-00 am | | Wake Up Call |
| 5-15 am | 5-30 am | Yoga / Jogging |
| 6-00 am | 8-00 am | Tuition |
| 8-00 am | 8-30 am | Bath & Change |
| 8-30 am | 9-00 am | Breakfast |
| 9-00 am | 10-00 am | Group Study |
| 12-30 am | 1-30 pm | Lunch |
| 4-30 pm | 4-45 pm | Tea & Snacks |
| 4-45 pm | 5-45 pm | Games & Sports |
| 5-45 pm | 6-00 pm | Wash Change Over |
| 6-00 pm | 6-30 pm | Prayer |
| 6-30 pm | 8-30 pm | Tuition, Self Study Under Supervisor |
| 8-30 pm | 9-15 pm | Dinner |
| 9-30 pm | 10-30 pm | Home Work |
| 11-00 pm | | Lights off |

**BGS Boys / Girls Hostel**
Agalagurki, Chickballapur - 562 101.
Ph. No. 08156-293096, 263173